## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ ಕೈಮಗ್ಗ ನೇಕಾರರಿಗೆ ಕೈಮಗ್ಗಗಳ ವಿನ್ಯಾಸಗಳ ಉನ್ನತೀಕರಣಕ್ಕಾಗಿ ಎಲೆಕ್ಟ್ರಾನಿಕ್ ಜಕಾರ್ಡ್ ಹಾಗೂ ನ್ಯೂಮ್ಯಾಟಿಕ್ / ಮೋಟರೈಸ್ಡ್ ಜಕಾರ್ಡ್ ಸಲಕರಣೆಗಳ ಕಿಟ್ ಒದಗಿಸುವ ಹೊಸ ಯೋಜನೆಯ ಮಾರ್ಗಸೂಚಿ

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ವಾಕೈ 25 ಜಕೈಯೋ 2017, ದಿನಾಂಕ: 24.05.2017.
2. ಜವಳಿ ಅಭಿವೃದ್ಧಿ ಆಯುಕ್ತರ ಪತ್ರ ಸಂಖ್ಯೆ: ಕೈಜಇ/ ಅಂಕಿಅಂಶ/ ಆಯವ್ಯಯ/2016-17, ದಿನಾಂಕ: 17.05.2017.

- - -

**ಸರ್ಕಾರಿ ಆದೇಶ ಸಂಖ್ಯೆ: ವಾಕೈ 25 ಜಕೈಯೋ 2017, ಬೆಂಗಳೂರು ದಿನಾಂಕ: 16.08.2017**

2017-18ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿದಂತೆ, ಕೈಮಗ್ಗಗಳಿಗೆ **ಎಲೆಕ್ಟ್ರಾನಿಕ್ ಜಕಾರ್ಡ್** ಹಾಗೂ **ನ್ಯೂಮ್ಯಾಟಿಕ್ ಸೌಲಭ್ಯಗಳನ್ನು** ಒದಗಿಸುವ ಹೊಸ ಯೋಜನೆಯಾಗಿರುತ್ತದೆ.

ಪ್ರಸ್ತುತ ಕೈಮಗ್ಗಗಳನ್ನು ಹೊಂದಿರುವ ಘಟಕಗಳಿಗೆ ಮಾರುಕಟ್ಟೆಯ ಬೇಡಿಕೆಗೆ ತಕ್ಕಂತೆ ವಿಶಿಷ್ಟ ವಿನ್ಯಾಸಗಳನ್ನು ಅಳವಡಿಸಲು ಪ್ರತಿಯೊಂದು ಉತ್ಪನ್ನಗಳಿಗೆ ಒಂದೊಂದು ಪ್ರತ್ಯೇಕ ವಿನ್ಯಾಸ ನೇಯಲು ಅನುಕೂಲವಾಗುವಂತೆ ಹೊಸ ಮಾದರಿಯ **ಎಲೆಕ್ಟ್ರಾನಿಕ್ ಜಕಾರ್ಡ್‌ಗಳನ್ನು** ಒದಗಿಸುವುದು ಸರ್ಕಾರದ ಯೋಜನೆಯಾಗಿದೆ. ಇದರಿಂದಾಗಿ ಹಳೆಯ ಯಾಂತ್ರಿಕ ಜಕಾರ್ಡ್‌ಗಳ ಬದಲಾಗಿ ಹೊಸ ಮಾದರಿಯ ಎಲೆಕ್ಟ್ರಾನಿಕ್ ಜಕಾರ್ಡ್‌ಗಳನ್ನು ಬಳಸುವುದರಿಂದ ಹೆಚ್ಚಿನ ಉತ್ಪಾದನೆಯನ್ನು ಮಾಡಬಹುದು ಹಾಗೂ ಪ್ರತಿ ಸಾರಿ ಹೊಸ ವಿನ್ಯಾಸ ಬದಲಾವಣೆಯ ಸಮಯದಲ್ಲಿ ಸಂದರ್ಭದಲ್ಲಿ ಆಗುವ ವೆಚ್ಚದ ಹಾಗೂ ಸಮಯವನ್ನು ಉಳಿತಾಯ ಮಾಡಬಹುದು.

ಪ್ರತಿ ಘಟಕಕ್ಕೆ ವೆಚ್ಚವಾಗುವ ಮೊತ್ತಕ್ಕೆ ಸರ್ಕಾರದ ವತಿಯಿಂದ ಸಾಮಾನ್ಯ ವರ್ಗದವರಿಗೆ ಶೇ.50 ರಷ್ಟು ಸಹಾಯಧನ ಹಾಗೂ ಪರಿಶಿಷ್ಠ ಜಾತಿ / ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇ.90 ರಷ್ಟು ಸಹಾಯಧನವನ್ನು ಕೆಳಕಂಡಂತೆ ಒದಗಿಸಲು ಉದ್ದೇಶಿಸಲಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರ.ಸ | ಹುಕ್‌ಗಳ ಸಂಖ್ಯೆ | ಅಂದಾಜು ಘಟಕ ವೆಚ್ಚ | ಸರ್ಕಾರದ ಸಹಾಯಧನ 50% (ಸಾಮಾನ್ಯ ವರ್ಗ) | ಸರ್ಕಾರದ ಸಹಾಯಧನ 90% (ಪ.ಜಾ/ಪ.ಪಂ) |
|---|---|---|---|---|
| 1 | 640/672 | 2.50 | 1.25 | 2.25 |
| 2 | 960 | 3.50 | 1.75 | 3.15 |
| 3 | 1344/1792 | 4.50 | 2.25 | 4.05 |

1) ಅರ್ಹತೆಗಳು

ಅ) ಸಹಕಾರ ಸಂಘಗಳು

- ಕೈಮಗ್ಗ ನೇಕಾರರ ಸಹಕಾರ ಸಂಘಗಳು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ನಿಬಂಧನೆಗಳನ್ವಯ ನೋಂದಣಿಯಾಗಿ ಕನಿಷ್ಠ 5 ವರ್ಷವಾಗಿರಬೇಕು.

- ಸಂಘವು ಕಾರ್ಯ ನಿರತ ಕೈಮಗ್ಗ ನೇಕಾರ ಸದಸ್ಯರನ್ನು ಹೊಂದಿರಬೇಕು.
- ಸಂಘವು ನೇಯ್ಗೆ ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿರಬೇಕು.
- ಪ್ರತಿ ವರ್ಷ ನಿಯಮಾನುಸಾರ ಲೆಕ್ಕ ಪರಿಶೋಧನೆ (ಆಡಿಟ್) ಆಗಿರಬೇಕು.
- ಎಲೆಕ್ಟ್ರಾನಿಕ್ ಜಕಾರ್ಡ್‌ಗಳನ್ನು ಅಳವಡಿಸಲು ಸಂಘದ ಹೆಸರಿನಲ್ಲಿ ಸಾಮೂಹಿಕ ನೇಯ್ಗೆ ಕೇಂದ್ರವನ್ನು ಹೊಂದಿದ್ದು, ಅದರಲ್ಲಿ ಮಗ್ಗಗಳನ್ನು ಅಳವಡಿಸಿರಬೇಕು.

ಆ) <u>ಫಲಾನುಭವಿಗಳು</u>

- ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
- ನೇಕಾರ ಫಲಾನುಭವಿಯು ಸ್ವಂತ ಘಟಕ ಹಾಗೂ ಸ್ವಂತ ಕೈಮಗ್ಗ ಹೊಂದಿರಬೇಕು ಹಾಗೂ ಫಲಾನುಭವಿಯ ಹೆಸರಿನಲ್ಲಿ ವಿದ್ಯುತ್ ಸಂಪರ್ಕ ಹೊಂದಿರಬೇಕು. (ಈ ಬಗ್ಗೆ ದಾಖಲೆ ಒದಗಿಸಬೇಕು).
- ನೇಕಾರ ಫಲಾನುಭವಿಯು ಬಾಡಿಗೆ ಮನೆ / ಶೆಡ್‌ನಲ್ಲಿ ಸ್ವಂತ ಕೈಮಗ್ಗ ಸ್ಥಾಪಿಸಿರುವವರು ಮನೆ / ಶೆಡ್ ಹಾಗೂ ವಿದ್ಯುತ್ ಸಂಪರ್ಕ ಬಾಡಿಗೆ ಆಧಾರದ ಮೇಲೆ ಪಡೆದಿರುವ ಬಗ್ಗೆ ಕರಾರು ಪತ್ರ ಒದಗಿಸಬೇಕು.
- ಜಕಾರ್ಡ್ ನೇಯ್ಗೆಯಲ್ಲಿ ಪರಿಣಿತಿ / ತರಬೇತಿ ಹೊಂದಿರಬೇಕು.

2) <u>ಹಣಕಾಸಿನ ನೆರವು</u>

- ನೇಕಾರರ ಅಗತ್ಯತೆಯ ಹಾಗೂ ಘಟಕ ವೆಚ್ಚಕ್ಕನುಗುಣವಾಗಿ ಸರ್ಕಾರದ ಸಹಾಯಧನ ಸಾಮಾನ್ಯ ಫಲಾನುಭವಿಗಳಿಗೆ ಶೇ.50ರಷ್ಟು ಸಹಾಯಧನ ಹಾಗೂ ಸರ್ಕಾರದ ಸಹಾಯಧನ ಪರಿಶಿಷ್ಠ ಜಾತಿ / ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇ.90 ರಷ್ಟು ಸಹಾಯಧನವನ್ನು ಒದಗಿಸಲು ಉದ್ದೇಶಿಸಲಾಗಿದೆ.
- ಉಳಿದ ಮೊತ್ತವನ್ನು ನೇಕಾರ ಫಲಾನುಭವಿಯು ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳಿಂದ ಸಾಲದ ರೂಪದಲ್ಲಿ ಭರಿಸತಕ್ಕದ್ದು ಹಾಗೂ ಸಹಕಾರ ಸಂಘದವರು ಬ್ಯಾಂಕ್ / ಹಣಕಾಸು ಸಂಸ್ಥೆಗಳಿಂದ ಸಾಲದ ರೂಪದಲ್ಲಿ ಅಥವಾ ಸ್ವಂತವಾಗಿ ಭರಿಸತಕ್ಕದ್ದು.

3) <u>ಯೋಜನೆಗೆ ಸಲ್ಲಿಸಬೇಕಾದ ದಾಖಲಾತಿಗಳು</u>

ಅ) <u>ಕೈಮಗ್ಗ ನೇಕಾರರ ಸಹಕಾರ ಸಂಘಗಳು</u>

- ನಮೂನೆ-1 ರಿಂದ 29 ರಲ್ಲಿ ಸಂಘದ ಮಾಹಿತಿ
- ಸಂಘದ ನೋಂದಣಿ ಪತ್ರದ ಪ್ರತಿ
- ಬೈಲಾ ಪ್ರತಿ / ಉಪ ನಿಯಮ
- ಆಡಳಿತ ಮಂಡಳಿಯ ಠರಾವು.
- ಕಾರ್ಯಕಾರಿ ಮಂಡಳಿಯ ಸದಸ್ಯರ ಪಟ್ಟಿ
- ಸಂಘದ ಕಾರ್ಯ ಚಟುವಟಿಕೆಗಳ ವರದಿ
- ಕಳೆದ 3 ವರ್ಷಗಳ ಆಡಿಟ್ ವರದಿ

..3

**ಫಲಾನುಭವಿಗಳಿಂದ ಪಡೆಯಬೇಕಾದ ದಾಖಲಾತಿಗಳು**

- ಸಾಮಾನ್ಯ ಅರ್ಜಿ ನಮೂನೆಯಲ್ಲಿ ಫಲಾನುಭವಿಯ ಮಾಹಿತಿ.
- ಫಲಾನುಭವಿಯ ಇತ್ತೀಚಿನ ಭಾವಚಿತ್ರ ಮತ್ತು ಆಧಾರ್ ಕಾರ್ಡ್ ಪ್ರತಿ.
- ಕೈಮಗ್ಗಗಳನ್ನು ಸ್ಥಾಪಿಸಿರುವ ಸ್ವಂತ / ಬಾಡಿಗೆ ಸ್ಥಳದ ದಾಖಲಾತಿ
- ವಿದ್ಯುತ್ ಸಂಪರ್ಕ ಹೊಂದಿರುವ ದಾಖಲಾತಿ. ಆರ್.ಆರ್. ನಂ.
- ಬ್ಯಾಂಕ್ / ಹಣಕಾಸಿನ ಸಂಸ್ಥೆಗಳಿಂದ ಸಾಲ ಮಂಜೂರಾತಿ ಒಪ್ಪಿಗೆ ಪತ್ರ
- ಸರ್ಕಾರದ ಸಹಾಯಧನದಿಂದ ಖರೀದಿಸಿದ ಎಲೆಕ್ಟ್ರಾನಿಕ್ ಜಕಾರ್ಡ್‌ನ್ನು ಕನಿಷ್ಟ ಐದು ವರ್ಷಗಳವರೆಗೆ ಮಾರುವ ಅಥವಾ ಪರಭಾರೆ ಮಾಡುವುದಿಲ್ಲವೆಂಬ ಬಗ್ಗೆ ಹಾಗೂ ಸರ್ಕಾರವು ನಿಗಧಿಪಡಿಸಿದ ಘಟಕ ವೆಚ್ಚಕ್ಕಿಂತ ತಗಲುವ ಹೆಚ್ಚುವರಿ ಮೊತ್ತವನ್ನು ಫಲಾನುಭವಿಯು ಭರಿಸುವ ಬಗ್ಗೆ ಮುಚ್ಚಳಿಕೆ ಪತ್ರ.

4) **ಅನುಷ್ಠಾನ**

- ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾ ಮಟ್ಟದ ಉಪ / ಸಹಾಯಕ ನಿರ್ದೇಶಕರು, ಫಲಾನುಭವಿ / ಸಹಕಾರ ಸಂಘಗಳನ್ನು ಯೋಜನೆಯ ನಿಯಮಾನುಸಾರ ಆಯ್ಕೆ ಮಾಡತಕ್ಕದ್ದು.
- ಸಹಕಾರ ಸಂಘಗಳು ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಸಂಧರ್ಭದಲ್ಲಿ ಕಡ್ಡಾಯವಾಗಿ ಕೆ.ಟಿ.ಪಿ.ಪಿ ನಿಯಮದಡಿ ಖರೀದಿ ಮಾಡತಕ್ಕದ್ದು.

5) **ಹಣ ಬಿಡುಗಡೆ**

- ಸಹಾಯಧನ ಸಾಮಾನ್ಯ ಫಲಾನುಭವಿಗಳಿಗೆ ಶೇ.50 ರಷ್ಟು ಹಾಗೂ ಪರಿಶಿಷ್ಠ ಜಾತಿ / ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇ.90 ರಷ್ಟು ಸಹಾಯಧನಕ್ಕೆ ಮೇಲ್ಪಟ್ಟು ಫಲಾನುಭವಿಯು ಸಾಲ ಪಡೆದ ಬ್ಯಾಂಕ್ / ಹಣಕಾಸು ಸಂಸ್ಥೆಗಳ ಮೂಲಕ ನಿಯಮಾನುಸಾರ ಬಿಡುಗಡೆ ಮಾಡುವುದು.
- ಘಟಕ ವೆಚ್ಚಕ್ಕಿಂತ ತಗಲುವ ಹೆಚ್ಚುವರಿ ಮೊತ್ತವನ್ನು ಫಲಾನುಭವಿ / ಸಹಕಾರ ಸಂಘದವರು ಭರಿಸತಕ್ಕದ್ದು.

6) **ಫಲಾನುಭವಿ / ಸಹಕಾರ ಸಂಘಗಳ ಆಯ್ಕೆ**

- ಪತ್ರಿಕಾ ಪ್ರಕಟಣೆ / ವಿಚಾರ ಸಂಕೀರ್ಣ / ಕಾರ್ಯಾಗಾರ / ಯೋಜನೆಗಳ ಮಾಹಿತಿಯನ್ನು ಒಳಗೊಂಡ ಕರಪತ್ರಗಳ ಮುದ್ರಣ ಮತ್ತು ವಿತರಣೆ / ಟಿ.ವಿ ಮತ್ತು ರೇಡಿಯೋ ಮಾಧ್ಯಮಗಳಲ್ಲಿ ಜಾಹೀರಾತು ನೀಡುವುದು / ವಿವಿಧ ಪ್ರಚಾರ ಮಾಧ್ಯಮಗಳ ಮೂಲಕ ಪ್ರಚಾರ ಮಾಡುವುದು / ಗ್ರಾಮ ಸಭೆಗಳಲ್ಲಿ ಭಾಗವಹಿಸಿ ಯೋಜನೆಗಳ ಕುರಿತು ವಿವರ ನೀಡುವುದರ ಮೂಲಕ ಫಲಾನುಭವಿ / ಸಹಕಾರ ಸಂಘಗಳ ಆಯ್ಕೆಯನ್ನು ಮಾಡುವುದು.
- ಪತ್ರಿಕಾ ಪ್ರಕಟಣೆ / ಬ್ರೋಚರ್ ಪ್ರತಿಗಳನ್ನು ತಮ್ಮ ವ್ಯಾಪ್ತಿಯ ಸಹಕಾರ ಸಂಘಗಳು / ಜಿಲ್ಲಾ ಕಛೇರಿ ಇತ್ಯಾದಿಗಳಲ್ಲಿ ಪ್ರಕಟಣಾ ಫಲಕದಲ್ಲಿ ಪ್ರಕಟಿಸುವುದು.
- ಯೋಜನೆಯ ಅರ್ಹತೆ ಬಗ್ಗೆ ಸ್ಥಳ ಪರಿಶೀಲನೆ ನಡೆಸಿ ನಿರ್ದಿಷ್ಟ ಶಿಫಾರಸ್ಸಿನೊಂದಿಗೆ ಮಂಜೂರಾತಿಗಾಗಿ ಸಲ್ಲಿಸುವುದು.

...4

ಪ್ರಸ್ತುತ ಕೈಮಗ್ಗಗಳನ್ನು ಹೊಂದಿರುವ ಘಟಕಗಳಿಗೆ ನೇಕಾರರ ಹೆಚ್ಚಿನ ಪರಿಶ್ರಮವನ್ನು ತಪ್ಪಿಸಿ ಹೆಚ್ಚಿನ ಉತ್ಪಾದನೆ ಹಾಗೂ ಗುಣಮಟ್ಟದ ಉತ್ಪಾದನೆಗೆ ಅನುಕೂಲವಾಗುವಂತೆ **ನ್ಯೂಮ್ಯಾಟಿಕ್ / ಮೋಟರೈಸ್ಡ್ ಜಕಾರ್ಡ್** ಸಲಕರಣೆಗಳ ಕಿಟ್‌ನ್ನು ಒದಗಿಸಲು ಸರ್ಕಾರವು ಯೋಜಿಸಿದೆ.

ಪ್ರತಿ ಘಟಕಕ್ಕೆ ವೆಚ್ಚವಾಗುವ ಮೊತ್ತಕ್ಕೆ ಸರ್ಕಾರದ ವತಿಯಿಂದ ಸಾಮಾನ್ಯ ವರ್ಗದವರಿಗೆ ಶೇ.50 ರಷ್ಟು ಸಹಾಯಧನ ಹಾಗೂ ಪರಿಶಿಷ್ಠ ಜಾತಿ / ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇ.90 ರಷ್ಟು ಸಹಾಯಧನವನ್ನು ಕೆಳಕಂಡಂತೆ ಒದಗಿಸಲು ಉದ್ದೇಶಿಸಲಾಗಿದೆ.

(ರೂ.ಗಳಲ್ಲಿ)

| ಕ್ರ.ಸಂ | ಕೈಮಗ್ಗಗಳ ಸಂಖ್ಯೆ | ಮೋಟರೈಸ್ಡ್ ಜಕಾರ್ಡ್ ಘಟಕ ವೆಚ್ಚ | ನ್ಯೂಮ್ಯಾಟಿಕ್ ಜಕಾರ್ಡ್ ವೆಚ್ಚ | ಸರ್ಕಾರದ ಸಹಾಯಧನ 50% (ಸಾಮಾನ್ಯ ವರ್ಗ) | ಸರ್ಕಾರದ ಸಹಾಯಧನ ಶೇ. 90 ರಷ್ಟು (ಪ.ಜಾ/ಪ.ಪಂ) |
|---|---|---|---|---|---|
| 1 | 1 | 15,000 | – | 7500 | 13,500 |
| 2 | 2 | – | 33,000 | 16500 | 29,700 |
| 3 | 4 | – | 50,000 | 25000 | 45,000 |

1) **ಅರ್ಹತೆಗಳು**

ಅ) **ಸಹಕಾರ ಸಂಘಗಳು**

- ಕೈಮಗ್ಗ ನೇಕಾರರ ಸಹಕಾರ ಸಂಘಗಳು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ನಿಬಂಧನೆಗಳನ್ವಯ ನೋಂದಣಿಯಾಗಿ ಕನಿಷ್ಠ 5 ವರ್ಷವಾಗಿರಬೇಕು.
- ಸಂಘವು ಕಾರ್ಯ ನಿರತ ಕೈಮಗ್ಗ ನೇಕಾರ ಸದಸ್ಯರನ್ನು ಹೊಂದಿರಬೇಕು.
- ಸಂಘವು ನೇಯ್ಗೆ ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿರಬೇಕು.
- ಪ್ರತಿ ವರ್ಷ ನಿಯಮಾನುಸಾರ ಲೆಕ್ಕ ಪರಿಶೋಧನೆ (ಆಡಿಟ್) ಆಗಿರಬೇಕು.
- **ನ್ಯೂಮ್ಯಾಟಿಕ್ / ಮೋಟರೈಸ್ಡ್ ಜಕಾರ್ಡ್** ಸಲಕರಣೆಗಳ ಕಿಟ್‌ಗಳನ್ನು ಅಳವಡಿಸಲು ಸಂಘದ ಹೆಸರಿನಲ್ಲಿ ಸಾಮೂಹಿಕ ನೇಯ್ಗೆ ಕೇಂದ್ರವನ್ನು ಹೊಂದಿದ್ದು, ಅದರಲ್ಲಿ ಮಗ್ಗಗಳನ್ನು ಅಳವಡಿಸಿರಬೇಕು.

ಆ) **ಫಲಾನುಭವಿಗಳು**

- ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
- ನೇಕಾರ ಫಲಾನುಭವಿಯು ಸ್ವಂತ ಘಟಕ ಹಾಗೂ ಸ್ವಂತ ಕೈಮಗ್ಗ ಹೊಂದಿರಬೇಕು ಹಾಗೂ ಫಲಾನುಭವಿಯ ಹೆಸರಿನಲ್ಲಿ ವಿದ್ಯುತ್ ಸಂಪರ್ಕ ಹೊಂದಿರಬೇಕು. (ಈ ಬಗ್ಗೆ ದಾಖಲೆ ಒದಗಿಸಬೇಕು).
- ನೇಕಾರ ಫಲಾನುಭವಿಯು ಬಾಡಿಗೆ ಮನೆ / ಶೆಡ್‌ನಲ್ಲಿ ಸ್ವಂತ ಕೈಮಗ್ಗ ಸ್ಥಾಪಿಸಿರುವವರು ಮನೆ / ಶೆಡ್ ಹಾಗೂ ವಿದ್ಯುತ್ ಸಂಪರ್ಕ ಬಾಡಿಗೆ ಆದಾರದ ಮೇಲೆ ಪಡೆದಿರುವ ಬಗ್ಗೆ ಕರಾರು ಪತ್ರ ಒದಗಿಸಬೇಕು.

..... 5

2) **ಹಣಕಾಸಿನ ನೆರವು**

- ನೇಕಾರರ ಅಗತ್ಯತೆಯ ಹಾಗೂ ಘಟಕ ವೆಚ್ಚಕ್ಕನುಗುಣವಾಗಿ ಸರ್ಕಾರದ ಸಹಾಯಧನ ಸಾಮಾನ್ಯ ಫಲಾನುಭವಿಗಳಿಗೆ ಶೇ.೫೦ರಷ್ಟು ಸಹಾಯಧನ ಹಾಗೂ ಸರ್ಕಾರದ ಸಹಾಯಧನ ಪರಿಶಿಷ್ಠ ಜಾತಿ / ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇ.೯೦ ರಷ್ಟು ಸಹಾಯಧನವನ್ನು ಒದಗಿಸಲು ಉದ್ದೇಶಿಸಲಾಗಿದೆ.
- ಉಳಿದ ಮೊತ್ತವನ್ನು ನೇಕಾರ ಫಲಾನುಭವಿಯು ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳಿಂದ ಸಾಲದ ರೂಪದಲ್ಲಿ ಅಥವಾ ಸ್ವಂತವಾಗಿ ಭರಿಸಲು ಶಕ್ತರಿರಬೇಕು.

3) **ಫಲಾನುಭವಿಗಳಿಂದ ಪಡೆಯಬೇಕಾದ ದಾಖಲಾತಿಗಳು**

- ಸಾಮಾನ್ಯ ಅರ್ಜಿ ನಮೂನೆಯಲ್ಲಿ ಫಲಾನುಭವಿಯ ಮಾಹಿತಿ.
- ಫಲಾನುಭವಿಯ ಇತ್ತೀಚಿನ ಭಾವಚಿತ್ರ ಮತ್ತು ಆಧಾರ್ ಕಾರ್ಡ್ ಪ್ರತಿ.
- ಕೈಮಗ್ಗಗಳನ್ನು ಸ್ಥಾಪಿಸಿರುವ ಸ್ವಂತ / ಬಾಡಿಗೆ ಸ್ಥಳದ ದಾಖಲಾತಿ
- ವಿದ್ಯುತ್ ಸಂಪರ್ಕ ಹೊಂದಿರುವ ದಾಖಲಾತಿ. ಆರ್.ಆರ್. ನಂ.
- ಬ್ಯಾಂಕ್ / ಹಣಕಾಸಿನ ಸಂಸ್ಥೆಗಳಿಂದ ಸಾಲ ಮಂಜೂರಾತಿ ಒಪ್ಪಿಗೆ ಪತ್ರ
- ಸರ್ಕಾರದ ಸಹಾಯಧನದಿಂದ ಖರೀದಿಸಿದ **ನ್ಯೂಮ್ಯಾಟಿಕ್ / ಮೋಟರೈಸ್ಡ್ ಜಕಾರ್ಡ್** ಸಲಕರಣೆಗಳ ಕಿಟ್‌ನ್ನು ಕನಿಷ್ಟ ಐದು ವರ್ಷಗಳವರೆಗೆ ಮಾರುವ ಅಥವಾ ಪರಭಾರೆ ಮಾಡುವುದಿಲ್ಲವೆಂಬ ಬಗ್ಗೆ ಹಾಗೂ ಸರ್ಕಾರವು ನಿಗಧಿಪಡಿಸಿದ ಘಟಕ ವೆಚ್ಚಕ್ಕಿಂತ ತಗಲುವ ಹೆಚ್ಚುವರಿ ಮೊತ್ತವನ್ನು ಫಲಾನುಭವಿಯು ಭರಿಸುವ ಬಗ್ಗೆ ಮುಚ್ಚಳಿಕೆ ಪತ್ರ.

4) **ಅನುಷ್ಠಾನ**

- ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾ ಮಟ್ಟದ ಉಪ / ಸಹಾಯಕ ನಿರ್ದೇಶಕರು, ಫಲಾನುಭವಿ / ಸಹಕಾರ ಸಂಘಗಳನ್ನು ಯೋಜನೆಯ ನಿಯಮಾನುಸಾರ ಆಯ್ಕೆ ಮಾಡತಕ್ಕದ್ದು.
- ಸಹಕಾರ ಸಂಘಗಳು ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಸಂಧರ್ಭದಲ್ಲಿ ಕಡ್ಡಾಯವಾಗಿ ಕೆ.ಟಿ.ಪಿ.ಪಿ ನಿಯಮದಡಿ ಖರೀದಿ ಮಾಡತಕ್ಕದ್ದು.

5) **ಹಣ ಬಿಡುಗಡೆ**

- ಸಹಾಯಧನ ಸಾಮಾನ್ಯ ಫಲಾನುಭವಿಗಳಿಗೆ ಶೇ.೫೦ ರಷ್ಟು ಹಾಗೂ ಪರಿಶಿಷ್ಠ ಜಾತಿ / ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇ.೯೦ ರಷ್ಟು ಸಹಾಯಧನಕ್ಕೆ ಮೇಲ್ಪಟ್ಟು ಫಲಾನುಭವಿಯು ಸಾಲ ಪಡೆದ ಬ್ಯಾಂಕ್ / ಹಣಕಾಸು ಸಂಸ್ಥೆಗಳ ಮೂಲಕ ನಿಯಮಾನುಸಾರ ಬಿಡುಗಡೆ ಮಾಡುವುದು.
- ಘಟಕ ವೆಚ್ಚಕ್ಕಿಂತ ತಗಲುವ ಹೆಚ್ಚುವರಿ ಮೊತ್ತವನ್ನು ಫಲಾನುಭವಿ / ಸಹಕಾರ ಸಂಘದವರು ಭರಿಸತಕ್ಕದು.

6) **ಫಲಾನುಭವಿ / ಸಹಕಾರ ಸಂಘಗಳ ಆಯ್ಕೆ**

- ಪತ್ರಿಕಾ ಪ್ರಕಟಣೆ / ವಿಚಾರ ಸಂಕಿರ್ಣ / ಕಾರ್ಯಾಗಾರ / ಯೋಜನೆಗಳ ಮಾಹಿತಿಯನ್ನು ಒಳಗೊಂಡ ಕರಪತ್ರಗಳ ಮುದ್ರಣ ಮತ್ತು ವಿತರಣೆ / ಟಿ.ವಿ ಮತ್ತು ರೇಡಿಯೋ ಮಾಧ್ಯಮಗಳಲ್ಲಿ ಜಾಹೀರಾತು ನೀಡುವುದು / ವಿವಿಧ ಪ್ರಚಾರ ಮಾಧ್ಯಮಗಳ ಮೂಲಕ ಪ್ರಚಾರ ಮಾಡುವುದು / ಗ್ರಾಮ ಸಭೆಗಳಲ್ಲಿ ಭಾಗವಹಿಸಿ ಯೋಜನೆಗಳ ಕುರಿತು ವಿವರ ನೀಡುವುದರ ಮೂಲಕ ಫಲಾನುಭವಿ / ಸಹಕಾರ ಸಂಘಗಳ ಆಯ್ಕೆಯನ್ನು ಮಾಡುವುದು.
- ಪತ್ರಿಕಾ ಪ್ರಕಟಣೆ / ಬ್ರೋಚರ್ ಪ್ರತಿಗಳನ್ನು ತಮ್ಮ ವ್ಯಾಪ್ತಿಯ ಸಹಕಾರ ಸಂಘಗಳು / ಜಿಲ್ಲಾ ಕಛೇರಿ ಇತ್ಯಾದಿಗಳಲ್ಲಿ ಪ್ರಕಟಣಾ ಫಲಕದಲ್ಲಿ ಪ್ರಕಟಿಸುವುದು.
- ಯೋಜನೆಯ ಅರ್ಹತೆ ಬಗ್ಗೆ ಸ್ಥಳ ಪರಿಶೀಲನೆ ನಡೆಸಿ ನಿರ್ದಿಷ್ಟ ಶಿಫಾರಸ್ಸಿನೊಂದಿಗೆ ಮಂಜೂರಾತಿಗಾಗಿ ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಡಿ.ಎಸ್.ಜೋಗೋಜಿ)
ಸರ್ಕಾರದ ಉಪಕಾರ್ಯದರ್ಶಿ (ಜವಳಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.
16/8/17

**ಇವರಿಗೆ,**

1. ಮಹಾಲೇಖಪಾಲರು, (ಎ ಮತ್ತು ಇ) ಜಿ.ಅಂಡ್ ಎಸ್.ಎ., ಕರ್ನಾಟಕ, ಆಡಿಟ್ ಭವನ, ಬೆಂಗಳೂರು.
2. ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ, ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.
4. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-1).
5. ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
6. ಶಾಖಾ ರಕ್ಷಾ ಕಡತ : ಹೆಚ್ಚುವರಿ ಪ್ರತಿಗಳು.

**ಪ್ರತಿ ಮಾಹಿತಿಗಾಗಿ:**

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು.